ಅಧ್ಯಾಯ-೬ Chapter-6

# ಮಧ್ಯಂಯುಗದ ಪ್ರಾರಂಭದಲ್ಲಿ ಸ್ತ್ರೀಶಿಕ್ಷಣ

(ಕ್ರಿ.ಶ ೮ ರಿಂದ ೧೦ ನೇ ಶತಮಾನ)

### ಅಧ್ಯಾಯ-೬

# ಮಧ್ಯಯುಗದ ಪ್ರಾರಂಭದಲ್ಲಿ ಸ್ತ್ರೀಶಿಕ್ಷಣ

## (ಕ್ರಿ.ಶ ೮ ರಿಂದ ೧೦ ನೇ ಶತಮಾನ)


೬.೧ ಮಧ್ಯಯುಗದ ಪ್ರಾರಂಭದಲ್ಲಿ ಭಾರತದ ಸ್ಥಿತಿಗತಿ 373

೬.೨ ಶಿಕ್ಷಣದ ಗುರಿಗಳು 377

೬.೨.೧ ಇಸ್ಲಾಂ ಧರ್ಮಪ್ರಚಾರ 377

೬.೨.೨ ಜ್ಞಾನ ಸಂಪಾದನೆ ಪ್ರಸಾರ 378

೬.೨.೩. ಶಿಕ್ಷಣವನ್ನು ವಿಸ್ತರಿಸುವುದು 379

೬.೨.೪ ಶೈಕ್ಷಣಿಕ ಮೌಲ್ಯಗಳನ್ನು ಬೆಳೆಸುವುದು. 380

೬.೨.೫ ಸಾಮಾಜಿಕ ನೀತಿನಿಯಮಗಳ ಬೆಳವಣಿಗೆ 381

೬.೨.೬ ಭೌತಿಕ ಪ್ರಗತಿ 381

೬.೨.೭ ರಾಜಕೀಯ ಉದ್ದೇಶ 382

೬.೨.೮ ಚಾರಿತ್ರ್ಯನಿರ್ಮಾಣ ಮತ್ತು ವ್ಯಕ್ತಿತ್ವದ ವಿಕಾಸ 382

೬.೨.೯ ಶಿಸ್ತಿನ ಪರಿಪಾಲನೆ 383

೬.೩ ಸ್ತ್ರೀ ಶಿಕ್ಷಣದ ಸ್ಥಿತಿಗತಿ ಹಾಗೂ ಸ್ತ್ರೀಯರಿಗೆ ಶಿಕ್ಷಣ ವ್ಯವಸ್ಥೆ 383

# ಅಧ್ಯಾಯ VI

# ಮಧ್ಯಯುಗದ ಪ್ರಾರಂಭದಲ್ಲಿ ಸ್ತ್ರೀಶಿಕ್ಷಣ

# (ಕ್ರಿ.ಶ. ೮ ರಿಂದ ೧೦ ನೇ ಶತಮಾನ)

## ೬.೧ ಮಧ್ಯಯುಗದ ಪ್ರಾರಂಭದಲ್ಲಿ ಭಾರತದ ಸ್ಥಿತಿಗತಿ

ವೇದಕಾಲ ಹಾಗೂ ವೇದೋತ್ತರಕಾಲಗಳಲ್ಲಿ ಒಂದು ನಿರ್ದಿಷ್ಟ ದೃಷ್ಟಿಕೋನದಿಂದ ಭೌತಿಕ, ನೈತಿಕ ಆಧ್ಯಾತ್ಮಿಕ, ವಿನಾಶಕ ಮತ್ತು ಅವಿನಾಶಕ ಹಿತಾಸಕ್ತಿಗಳನ್ನು, ಜೀವನ ಮೌಲ್ಯಗಳನ್ನು ಸುಸ್ಪಷ್ಟವಾಗಿ ವ್ಯಾಖ್ಯಾನಿಸಿ ನ್ಯಾಯಸಮ್ಮತ ಭಾವನೆ ಹಾಗೂ ಪ್ರಮಾಣಗಳಿಂದ ಜಗತ್ತಿನಲ್ಲಿಯೇ ಉತ್ಕೃಷ್ಟವೆನಿಸಿದ ಸಂಸ್ಕೃತಿಗೆ ಭಾರತವು ತಳಪಾಯ ಹಾಕಿಕೊಟ್ಟಿದ್ದನ್ನು ನಾವೀಗಾಗಲೇ ಅಭ್ಯಸಿಸಿದ್ದೇವೆ. ಜೈನ ಹಾಗೂ ಬೌದ್ಧ ಧರ್ಮಗಳು ವೇದಕಾಲದ ಸಂಸ್ಕೃತಿಯಲ್ಲಿ ಹಾಸು ಹೊಕ್ಕಾಗಿದ್ದಂತಹ ಆತ್ಮ, ದುಃಖ, ಕರ್ಮ, ಮುಕ್ತಿ, ಇಚ್ಛೆ, ಪುನರ್ಜನ್ಮ ಈ ಮುಂತಾದವುಗಳಿಗೆ ಸಾಮಾಜಿಕವಲಯದ ಸ್ವಾಭಾವಿಕ ಸಿದ್ಧಾಂತಗಳಾಗಿ ರೂಪುಕೊಟ್ಟು ಮುಕ್ತಿ ಮಾರ್ಗವನ್ನು ಪ್ರತಿಪಾದಿಸಿ ಭಾರತೀಯ ಸಂಸ್ಕೃತಿಯನ್ನು ಸಂಪದೀಕರಣಗೊಳಿಸುವಲ್ಲಿ ಮಹತ್ವದ ಪಾತ್ರವಹಿಸಿದವು. ಆಯಾ ಕಾಲಧರ್ಮ ಸಾಮಾಜಿಕ ಪರಿಸ್ಥಿತಿ, ರಾಜಕೀಯ ಸ್ಥಿತಿಗತಿಗಳಿಗನುಗುಣವಾಗಿ ಪ್ರತಿಯೊಂದು ಧರ್ಮವು ಕೊಟ್ಟ ಕೊಡುಗೆಗಳು ಭಾರತದ ಉತ್ಕೃಷ್ಟವಾದ ಸಂಸ್ಕೃತಿ ಬೆಳೆಸುವಲ್ಲಿ ಕಾಣಿಕೆಗಳಾದವು.

ಆ ಕಾಲಗಳಲ್ಲಿ ಭಾರತದ ಆಡಳಿತ ರಾಜಮಹಾರಾಜರ ಅಂಕಿತದಲ್ಲಿತ್ತು, ಉತ್ತರಭಾರತದಲ್ಲಿ ಮೌರ್ಯರು, ಶಂಗ ಹಾಗೂ ಕಣ್ವರು, ಶಾತವಾಹನರು, ಗುಪ್ತರು, ಅದೇ ರೀತಿಯಲ್ಲಿ ದಕ್ಷಿಣಭಾರತದಲ್ಲಿ ಬನವಾಸಿಯ ಕದಂಬರು, ತಲಕಾಡಿನ ಗಂಗರು, ಬಾದಾಮಿ ಚಾಲುಕ್ಯರು, ಕಂಚಿಯ ಪಲ್ಲವರು, ಮಾನ್ಯಖೇಟದ ರಾಷ್ಟ್ರಕೂಟರು ಪಾಂಡ್ಯರು, ಕಲ್ಯಾಣದ ಚಾಲುಕ್ಯರು, ವಾರಂಗಲ್ಲಿನ ಕಾಕತೀಯರು, ವೇದೋತ್ತರ ಕಾಲದ ಅಂತ್ಯದಲ್ಲಿ ಉತ್ತರ ಭಾರತದಲ್ಲಿ ರಜಪೂತರು ಭಾರತವನ್ನಾಳಿದರು.

ಈ ಎಲ್ಲ ರಾಜರುಗಳು ತಮ್ಮ ರಾಜ್ಯ ವಿಸ್ತಾರದ ಜೊತೆಯಲ್ಲಿ ಧಾರ್ಮಿಕ ಬೆಳವಣಿಗೆ, ಶೈಕ್ಷಣಿಕ ಬೆಳವಣಿಗೆ, ಕಲೆ, ವಾಸ್ತುಶಿಲ್ಪ ಮತ್ತು ಸಂಸ್ಕೃತಿಗಳ ಬೆಳವಣಿಗೆಯಲ್ಲಿ ತಮ್ಮದೇ ಆದ ಕೊಡುಗೆ ಕೊಟ್ಟು ಭಾರತೀಯ ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಂಡು ಬಂದರು. ಇದರಿಂದ ಭಾರತವು ಎಲ್ಲ ದೃಷ್ಟಿಗಳಿಂದಲೂ ಸಂಪದ್ಭರಿತವಾಯಿತು.

ಈ ಮೇಲೆ ಪ್ರತಿಪಾದಿಸಿದಂತೆ ಕ್ರಿ.ಶ ಏಳನೆಯ ಶತಮಾನದವರೆಗೂ ಭಾರತ ಬಹುತೇಕ ಹಿಂದೂ ಅರಸರ ಆಳ್ವಿಕೆಗೆ ಒಳಪಟ್ಟಿತ್ತು. ಉತ್ತರದಲ್ಲಿ ಹರ್ಷವರ್ಧನ ಮತ್ತು ದಕ್ಷಿಣದಲ್ಲಿ ಪುಲಿಕೇಶಿ ಏಳಿಗೆಯಲ್ಲಿದ್ದರು. ಆಗ ಪ್ರಧಾನ ಧರ್ಮ ಹಿಂದೂಧರ್ಮ, ಪ್ರಧಾನ ಸಂಸ್ಕೃತಿ ಹಿಂದೂ ಸಂಸ್ಕೃತಿಯಾಗಿತ್ತು. ಹರ್ಷವರ್ಧನನ ಪತನಾನಂತರ ರಾಜಕೀಯದಲ್ಲಿ ಅನೈಕ್ಯ, ಅನಾಯಕತ್ವ ಉಂಟಾಯಿತು. ಯಾದವೀ ಕಲಹಗಳು ಮತ್ತು ವಿವಿಧ ರಾಜ್ಯಗಳ ಪರಸ್ಪರ ವೈರತ್ವ ವಿಪರೀತವಾಗಿ ಬೆಳೆದಿತ್ತು. ಇದಕ್ಕೆಲ್ಲ ಒಂದು ಪ್ರಬಲವಾದ ಚಕ್ರಾಧಿಪತ್ಯ ಇಲ್ಲದುದೇ ಪ್ರಮುಖ ಕಾರಣವಾಗಿತ್ತು. ಹರ್ಷನ ಪತನಾ ನಂತರ ಅವನ ಸಾಮ್ರಾಜ್ಯ ವಿವಿಧ ರಾಜ್ಯಗಳಲ್ಲಿ ಹರಿದು ಹಂಚಿಹೋಗಿತ್ತು. ಇದು ಪರಕೀಯರ ದಾಳಿಗೆ ಆಸ್ಪದ ಮಾಡಿಕೊಟ್ಟಿತು.

ಮೊದಲು ಗ್ರೀಕರು, ಸಿಥಿಯನ್ನರು, ಹೂಣರು ಮುಂತಾದವರು ಆಕ್ರಮಣ ಮಾಡಿದರು. ಆದರೆ ಇವರು ಭಾರತದಲ್ಲಿದ್ದಷ್ಟು ಕಾಲ ಇಲ್ಲಿನ ಸಂಸ್ಕೃತಿಗೆ ಹೊಂದಿಕೊಂಡೇ ಇದ್ದರು. ಆದ್ದರಿಂದ ಅವರ ದಾಳಿ ಭಾರತೀಯ ಇತಿಹಾಸಪುಟಗಳಲ್ಲಿ ದಪ್ಪಕ್ಷರಗಳಲ್ಲಿ ಬರೆದಿಡುವಂತಹ ದಾಳಿಯಾಗಲಿಲ್ಲ.

ಆದರೆ ಕ್ರಿ.ಶ. ೭೧೨ ರಲ್ಲಿ ಭಾರತದ ಮೇಲೆ ಆಕ್ರಮಣ ಮಾಡಿದ ಅರಬರ ದಾಳಿ ಪ್ರತ್ಯೇಕ ಸಾಮಾಜಿಕ ವ್ಯವಸ್ಥೆಯೇ ರೂಪುಗೊಳ್ಳಲು ನಾಂದಿ ಹಾಡಿತು. ಭಾರತದ ಮೇಲೆ ದಾಳಿ ಎಸಗಿದ ಮುಸ್ಲಿಮರಲ್ಲಿ ಅರಬರೇ ಮೊದಲಿಗರು. ಇವರ ದಾಳಿ ಪ್ರಾರಂಭವಾದಂತೆ ಮಧ್ಯಕಾಲದ ಭಾರತದ ಇತಿಹಾಸವೂ ಪ್ರಾರಂಭವಾಯಿತೆನ್ನಬಹುದು. ಹಿಂದಿನ ಆಕ್ರಮಣಕಾರರ ಆಕ್ರಮಣಗಳಿಗೂ ಅರಬರ ಆಕ್ರಮಣಗಳಿಗೂ ಬಹಳ ವ್ಯತ್ಯಾಸವಿತ್ತು. ಇವರು ಎಂದಿಗೂ ಇಲ್ಲಿನ ಸಂಸ್ಕೃತಿ ವ್ಯವಸ್ಥೆಗೆ ಹೊಂದಿಕೊಳ್ಳಲಿಲ್ಲ. ಇದರಿಂದ ಹೊಸ ಶೈಕ್ಷಣಿಕ, ಸಾಮಾಜಿಕ, ರಾಜಕೀಯ ವ್ಯವಸ್ಥೆಗಳು ರೂಪುಗೊಳ್ಳುವಂತಾಯಿತು. ಈ ಅವಧಿಯಲ್ಲಿ ಹಿಂದೂ ಸಂಸ್ಕೃತಿ ಏರುಪೇರುಗಳನ್ನು ಅನುಭವಿಸಬೇಕಾಯಿತು.

ಭಾರತದ ಮೇಲೆ ಅರಬರು ಆಕ್ರಮಣ ಮಾಡಲು ಅನೇಕ ಅಂಶಗಳು ಪ್ರೇರಕವಾಗಿವೆ. ಮೊದಲನೇಯದಾಗಿ ಇಲ್ಲಿನ ಸಂಪತ್ತು ಹಾಗು ಉತ್ಕೃಷ್ಟ ಭೂಮಿ ಇವು ಮರುಭೂಮಿಯ ಅರಬರಿಗೆ ಪ್ರಿಯವಾಗಿ ಕಂಡವು. ಈ ಮೊದಲೇ ಅರಬರು ಭಾರತದೊಂದಿಗೆ ವ್ಯಾಪಾರ ಸಂಪರ್ಕವನ್ನು ಹೊಂದಿದ್ದು ಇಲ್ಲಿನ ಸ್ಥಿತಿಗತಿಗಳ ಬಗ್ಗೆ ಚಿರಪರಿಚಿತರಾಗಿದ್ದರು. ಈ ನಡುವೆ ಇಸ್ಲಾಂ ಧರ್ಮ ಸ್ವೀಕರಿಸಿದ ಅರಬರಿಗೆ ಇಸ್ಲಾಂ ಧರ್ಮವನ್ನು ಭಾರತದಲ್ಲಿಯು ಜನಪ್ರಿಯಗೊಳಿಸುವ ಹೇತುವುಂಟಾಯಿತು. ಈ ರೀತಿಯಲ್ಲಿ ಭಾರತದ ಸಂಪತ್ತು, ಭೂಮಿ, ಧರ್ಮಪ್ರಸಾರ ಈ ಕಾರಣಗಳಿಂದ ಭಾರತದ ಕಡೆಗೆ ಗಮನಹರಿಸಿ ಯಶಸ್ವಿಯಾದರು.

ಕ್ರಿ.ಶ. ೭೧೨ ರಲ್ಲಿ ಸುಸಜ್ಜಿತವಾದ ಸೈನ್ಯದೊಡನೆ ಮೊಟ್ಟಮೊದಲು ದಾಳಿ ಮಾಡಿದ ಅರಬ ಅರಸ ಮಹಮ್ಮದ - ಬಿನ್- ಖಾಸಿಂ ಸಿಂಧ್ ಪ್ರಾಂತ್ಯದ ಮೇಲೆ ಆಕ್ರಮಣ ಮಾಡಿ ಜಯಗಳಿಸಿದ. ಮುಂದೆ ಅನೇಕ ಪ್ರಾಂತ್ಯಗಳು ಇವನ ವಶವಾದವು. ಇದರೊಂದಿಗೆ ಹೇರಳವಾದ ಸಂಪತ್ತು ಇವನ ಪಾಲಾಯಿತು.

ಹೀಗೆ ಅರಬರ ಆಡಳಿತ ಪ್ರಾರಂಭವಾಗಿ ಇದು ಸುಮಾರು ಒಂದೂವರೆ ಶತಮಾನಗಳ ಕಾಲ ಮುಂದುವರಿಯಿತು.

ಆರಂಭದಲ್ಲಿ ಧರ್ಮಾಂಧರಾದ ಅರಬರು ಹಿಂದೂಗಳಿಗೆ ಬಹಳ ಹಿಂಸೆ ಕೊಡಲಾರಂಭಿಸಿದ್ದರು. ಹಿಂದೂ ದೇವಾಲಯಗಳನ್ನು ನೆಲಸಮಗೊಳಿಸಹತ್ತಿದ್ದರು. ಆದರೆ ರಾಜ್ಯಪಾಲ ಹಜಾಜ್ ಧಾರ್ಮಿಕ ಸಹಿಷ್ಣುತೆಯುಳ್ಳವನಾಗಿದ್ದು ಮಹಮ್ಮದ್ - ಬಿನ್ - ಖಾಸಿಂಗೆ ಈ ರೀತಿ ಆದೇಶ ನೀಡಿದ "ಹಿಂದುಗಳ ರಕ್ಷಣೆ ನಮ್ಮದಾಗಿದೆ. ಅವರ ಆಸ್ತಿ ಪಾಸ್ತಿಗಳನ್ನು ದೋಚುವುದು ಕಷ್ಟಸಾಧ್ಯ. ಧಾರ್ಮಿಕ ವಿಚಾರದಲ್ಲಿ ಅವರು ಸ್ವತಂತ್ರರು. ಆ ಬಗ್ಗೆ ಯಾವ ನಿಷೇಧವೂ ಕೂಡದು." ಹಜಾಜ್‌ನ ಆದೇಶವನ್ನು ಜಾರಿಯಲ್ಲಿ ತಂದ ಖಾಸಿಂ 'ಕ್ರಿಶ್ಚಿಯನ್ ಮತ್ತು ಯಹೂದಿಗಳ ಮತದಂತೆ ಇನ್ನು ಮುಂದೆ ಹಿಂದೂಗಳ ದೇವಾಲಯಗಳು ಮುಸ್ಲಿಂರ ಆಕ್ರಮಣದಿಂದ ಹೊರತಾಗಿವೆ' ಎಂಬ ಪ್ರಕಟಣೆ ಹೊರಡಿಸಿದ. ಇದರಿಂದ ಸಧ್ಯಕ್ಕೆ ಹಿಂದೂ ದೇವಾಲಯಗಳ ನಿರ್ಮೂಲನೆ ನಿಂತಿತು.

ಅರಬರ ಸಿಂಧ್ ಆಕ್ರಮಣ ಭಾರತದ ಇತಿಹಾಸದ ಮೇಲೆ ಅಂತಹ ಮಹಾ ಪರಿಣಾಮವನ್ನೇನೂ ಬೀರಲಿಲ್ಲ. ಆದರೆ ಸಾಮಾಜಿಕ ಮತ್ತು ಸಾಂಸ್ಕೃತಿಕವಾಗಿ ಹಿಂದು-ಮುಸ್ಲಿಂರಲ್ಲಿ

ಪರಸ್ಪರ ಪ್ರಭಾವ ಬೀರದೇ ಹೋಗಲಿಲ್ಲ. ಅನೇಕ ವರ್ಷ ಇಲ್ಲಿ ನೆಲೆಸಿದ ಅರಬರು ಸ್ಥಳೀಯ ಸ್ತ್ರೀಯರನ್ನು ವಿವಾಹವಾಗತೊಡಗಿದರು. ಪರಿಣಾಮವಾಗಿ ಅವರ ಪೀಳಿಗೆಯಾದ ಮಿಶ್ರ ಜನಾಂಗ ಅಸ್ತಿತ್ವಕ್ಕೆ ಬಂದಿತು. ಇಷ್ಟಾದರೂ ಭಾರತೀಯರ ಭಾಷೆ, ಸಂಪ್ರದಾಯ, ನಡೆ-ನುಡಿ, ರೀತಿ-ನೀತಿಗಳಲ್ಲಿ ಯಾವ ಬದಲಾವಣೆಯೂ ಉಂಟಾಗಲಿಲ್ಲ. ಅರಬರು ಭಾರತೀಯರ ಧಾರ್ಮಿಕ ಜೀವನದ ಮೇಲೆಯೂ ಪ್ರಭಾವ ಬೀರಲಿಲ್ಲ. ಕೆಲವೊಮ್ಮೆ ಬಲವಂತ ಮತಾಂತರ, ಆಗಾಗ ಹಿಂದೂ ದೇವಾಲಯಗಳ ನಾಶ ನಡೆಯುವುದು ಬಿಟ್ಟರೆ ಭಾರತೀಯರ ಧಾರ್ಮಿಕ ನಂಬಿಕೆಗಳನ್ನು ಅರಬರಿಂದ ಅಲುಗಾಡಿಸಲಾಗಲಿಲ್ಲ. ಬದಲಾಗಿ ಸಾಂಸ್ಕೃತಿಕವಾಗಿ ಹಿಂದುಳಿದಿದ್ದ ಅರಬರು ಹೆಚ್ಚಿನದಾಗಿ ಭಾರತೀಯರಿಂದ ಪ್ರಭಾವಿತರಾದರು. ಭಾರತೀಯ ವಿದ್ವಾಂಸರ, ದಾರ್ಶನಿಕರ, ವಿಜ್ಞಾನಿಗಳ ಘನವಿದ್ವತ್ತಿಗೆ ಮಾರು ಹೋಗಿ ಅವರಲ್ಲಿ ಶಿಷ್ಯವೃತ್ತಿ ಸ್ವೀಕರಿಸಿದರು. ಡಾ. ಈಶ್ವರೀಪ್ರಸಾದರವರ ಮಾತಿನಲ್ಲಿ ಹೇಳುವುದಾದರೆ ರಸಾಯನ ಶಾಸ್ತ್ರ, ವೈದ್ಯಕೀಯ, ಖಗೋಳ, ಗಣಿತಶಾಸ್ತ್ರ ಮತ್ತು ತತ್ವಶಾಸ್ತ್ರ ಮುಂತಾದ ವಿಷಯಗಳನ್ನು ತಿಳಿಯಲು ಅರಬ್ ವಿದ್ವಾಂಸರು ಭಾರತೀಯ ಬ್ರಾಹ್ಮಣ ಘನಪಂಡಿತರುಗಳು ಮತ್ತು ಬೌದ್ಧವಿದ್ವಾಂಸರ ಬಳಿ ಹೋದರು; ಮತ್ತು ಕಾರ್ಯಾಚರಣೆಯಲ್ಲಿ ತರಬಲ್ಲ ಆಡಳಿತ ವಿಚಕ್ಷಣೆಯನ್ನು ಅರಬರು ಹಿಂದುಗಳಿಂದ ಕಲಿತರು (ಫಾಲಾಕ್ಷ, ೨೦೦೦. ಪು.೩೬೯).

ಮುಂದೆ ಬಹಳಷ್ಟು ವರ್ಷ ಅರಬರು ಭಾರತದಲ್ಲಿ ಆಳವಾಗಿ ಬೇರೂರಲಾಗಲಿಲ್ಲ. ಕೆಲವು ಪ್ರಬಲ ರಾಜರ ಆಡಳಿತ; ಅರಬರ ಪಾಶ್ಚಾತ್ಯ ಪ್ರದೇಶಗಳನ್ನು ಗೆಲ್ಲುವ ಹಂಬಲ; ಮಹಮ್ಮದ್ ಖಾಸಿಂನ ಅಕಾಲ ಮರಣ; ಅರಬರ ದಾಳಿಗೆ ಸ್ಫೂರ್ತಿದಾಯಕರೂ, ಬೆಂಬಲಿಗರೂ ಆದ ಖಲೀಫರಲ್ಲಿನ ಆಂತರಿಕ ಕದನಗಳು; ಈ ಮಧ್ಯೆ ಟರ್ಕರ ಆಗಮನ ಇವೆಲ್ಲ ಅರಬರ ಪತನಕ್ಕೆ ಕಾರಣಗಳಾದವು. ಒಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಸಿಂಧ್ ಅರಬರಿಂದ ಸ್ವತಂತ್ರವಾಯಿತು.

ಅರಬರ ನಂತರ ಭಾರತವನ್ನು ಮುತ್ತಿದ ಮುಸ್ಲಿಂರೆಂದರೆ ಟರ್ಕರು, ಇವರು ಅರಬರು ಆರಂಭಿಸಿದ ಕಾಯಕವನ್ನು ಇಲ್ಲಿ ಪೂರ್ಣಗೊಳಿಸಿದವರು. ೧೦ ನೇ ಶತಮಾನದಲ್ಲಿ ಭಾರತವನ್ನಾಳಿದ ಟರ್ಕರೆಂದರೆ ಅಬ್ದುಲ್ ಮಾಲಿಕ್, ಅಲಪ್ತಗೀನ್, ಸಬಕ್ತಗೀನ್ ಇವರ ತರುವಾಯ ಹತ್ತನೇ ಶತಮಾನದ ಕೊನೆಯಲ್ಲಿ ಈತನ ಮಗ ಮಹಮ್ಮದ್ ಘಜ್ನಿ ಆಡಳಿತಾರೂಢನಾಗಿ ತನ್ನ ದಂಡಯಾತ್ರೆಯ ಮೂಲಕ ಸಾಮ್ರಾಜ್ಯ ವಿಸ್ತರಿಸಿ ಹನ್ನೊಂದನೇ ಶತಮಾನದ ಪೂರ್ವಾರ್ಧದವರೆಗೆ ಆಡಳಿತ ನಡೆಸಿದ. (ಕ್ರಿ.ಶ. ೯೯೭-೧೦೩೦)

ಮಹಮ್ಮದ್ ಘಜ್ನಿಯ ಭಾರತದ ದಾಳಿಗೂ ಇಸ್ಲಾಂ ಧರ್ಮ ಪ್ರಸಾರ ಮತ್ತು ಸಂಪತ್ತಿನ ಲೂಟಿ ಪ್ರಮುಖ ಕಾರಣವಾಗಿತ್ತು. ಈ ಧ್ಯೇಯಸಾಧನೆಯಲ್ಲಿ ತೊಡಗಿಸಿಕೊಂಡವರಲ್ಲಿ ಮಹಮ್ಮದ್ ಘಜ್ನಿಯಂಥವರು ವಿರಳ ಎಂಬುದಾಗಿ ಇತಿಹಾಸಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

ಈ ರೀತಿಯಲ್ಲಿ ೮ರಿಂದ ೧೦ ನೇ ಶತಮಾನದಲ್ಲಿ ಅರಬರ ಹಾಗೂ ಟರ್ಕರ ದಾಳಿಯು ಭಾರತದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ ಜೀವನದ ಮೇಲೆ ತನ್ನದೇ ಆದಂತಹ ಪ್ರಭಾವ ಬೀರಿತು.

## ೬.೨ ಶಿಕ್ಷಣದ ಗುರಿಗಳು

ಮಧ್ಯಯುಗದ ಪ್ರಾರಂಭದ ಎರಡು ಶತಮಾನಗಳಲ್ಲಿ ಅರಬರು ಹಾಗೂ ಟರ್ಕರ ದಾಳಿಗಳಿಂದ ಭಾರತದ ಸಾಮಾಜಿಕ ಪರಿಸ್ಥಿತಿಯಲ್ಲಿ ಬದಲಾದ ಕಾರಣ ಶಿಕ್ಷಣವೂ ಬದಲಾವಣೆ ಕಂಡಿತು. ತಮ್ಮ ಸಾಮ್ರಾಜ್ಯ ಸ್ಥಾಪಿಸಿದ ಮುಸ್ಲಿಂ ಸಾಮ್ರಾಜ್ಯ ಶಾಹಿಗಳು ತಮ್ಮದೇ ಆದಂತಹ ಶಿಕ್ಷಣ ಪದ್ಧತಿಯನ್ನು ಜಾರಿಗೊಳಿಸಿದರು. ಇವರ ಶಿಕ್ಷಣದ ಗುರಿಗಳೂ ಉದಾತ್ತವಾಗಿಯೇ ಇದ್ದವು. ಈ ಗುರಿಗಳು ಇಂತಿವೆ.

### ೬.೨.೧ ಇಸ್ಲಾಂ ಧರ್ಮಪ್ರಚಾರ

ಇಸ್ಲಾಂ ಧರ್ಮದ ಸಿದ್ಧಾಂತಗಳು, ಮೌಲ್ಯಗಳು, ಕಾಯ್ದೆಗಳು, ಸಾಮಾಜಿಕ ಪದ್ಧತಿಗಳು ಮುಂತಾದವುಗಳನ್ನು ಪ್ರಚಾರ ಮಾಡಿ ಜನಜೀವನದಲ್ಲಿ ಹಾಸು ಹೊಕ್ಕಾಗುವಂತೆ ಮಾಡುವುದು ಅಂದಿನ ಶಿಕ್ಷಣದ ಗುರಿಯಾಗಿತ್ತು.

ಈ ಹಿಂದೆಯೇ ವಿವರಿಸಿದಂತೆ ಭಾರತದ ಮೇಲೆ ಮಹಮ್ಮದೀಯರ ದಾಳಿಗೆ ಪ್ರಮುಖ ಕಾರಣಗಳಲ್ಲಿ ಧರ್ಮಪ್ರಚಾರವೂ ಒಂದಾಗಿತ್ತು. ಅರಬ್ ಅರಸ ಸಿಂಹಾಸನಾರೂಢನಾದ ಬಳಿಕ ವಿಚಾರ ಮಾಡಿದ್ದೆಂದರೆ ಭಾರತದ ಸಂಪತ್ತಿನ ಲೂಟಿ ಮತ್ತು ಧರ್ಮಪ್ರಚಾರ. ಪ್ರಾರಂಭದಲ್ಲಿ ಮತಾಂತರ ಕಡ್ಡಾಯವಾಗಿದ್ದು ಬಳಿಕ ಇದಕ್ಕೆ ನಿಷೇಧ ಉಂಟಾಯಿತು. ಆದರೂ ಬಲವಂತಹ ಮತಾಂತರಗಳು ನಡೆದೇ ಇದ್ದವು. ಇಸ್ಲಾಂ ಧರ್ಮದ ತತ್ವಗಳು ಮತ್ತು ವಿಧಿ-ವಿಧಾನಗಳನ್ನು ಅರಿತುಕೊಂಡು ಅದರಂತೆ ನಡೆದುಕೊಂಡು ಮುಂದೆ ಅದನ್ನು ಪರಿಪಾಲಿಸುವಂತೆ ಮಡುವುದು ಅವರ ಗುರಿಯಾಗಿತ್ತು. ಧರ್ಮಪ್ರಸಾರದ ಇವರ ಆಕಾಂಕ್ಷೆಯು ಶಿಕ್ಷಣದ ಮೇಲೂ ಪ್ರಭಾವ ಬೀರಿತು. ಜನರ ಭಾವನೆಗಳಲ್ಲಿ

ಆಶೋತ್ತರಗಳಲ್ಲಿ ಹಾಗೂ ವರ್ತನೆಗಳಲ್ಲಿ ಬದಲಾವಣೆ ತರಲು ಬಳಸುವ ಪರಿಣಾಮಕಾರೀ ಮಾಧ್ಯಮವಾದ ಶಿಕ್ಷಣ ಮಹಮ್ಮದೀಯರ ಧರ್ಮಪ್ರಚಾರದ ಆಶೋತ್ತರಗಳಿಂದ ತನ್ನ ರೂಪುರೇಶೆ ಬದಲಿಸಿಕೊಂಡಿತು.

ಇದಕ್ಕಾಗಿ ಸಾಮೂಹಿಕ ಪ್ರಾರ್ಥನೆ, ಧಾರ್ಮಿಕ ವಿಧಿ-ವಿಧಾನಗಳ ಆಚರಣೆ ಪ್ರಾಥಮಿಕ ಹಂತದಿಂದಲೇ ಶಿಕ್ಷಣದಲ್ಲಿ ಕಡ್ಡಾಯವಾದವು. ಧರ್ಮ ಪ್ರಸಾರದ ಕಾರ್ಯವು ಅತ್ಯಂತ ಪವಿತ್ರವಾದುದು ಅಲ್ಲಾನಿಗೆ ಅತ್ಯಂತ ಪ್ರಿಯವಾದುದು ಧರ್ಮ ಪ್ರಚಾರಕನೇ ನಿಜವಾದ ಹುತಾತ್ಮನಾಗಬಲ್ಲನು ಎಂಬ ಭಾವನೆ ಹುಟ್ಟಿಸಿದರು. ಜೀವನದಲ್ಲಿ ಸಾರ್ಥಕತೆಗಾಗಿ ಮಾತ್ರವಲ್ಲ ಮರಣಾನಂತರದ ಜೀವನಕ್ಕಾಗಿಯೂ ಧಾರ್ಮಿಕ ಶಿಕ್ಷಣ ಅವಶ್ಯವೆಂದು ಭಾವಿಸಿದ್ದರು.

**೬.೨.೨ ಜ್ಞಾನ ಸಂಪಾದನೆ ಮತ್ತು ಪ್ರಸಾರ**

ಜ್ಞಾನ (ಇಲ್ಮ) ವು ಪ್ರತಿಯೊಬ್ಬರನ್ನು ಕತ್ತಲೆಯಿಂದ (ಅಜ್ಞಾನ) ಬೆಳಕಿನತ್ತ (ಉತ್ತಮ ಜೀವನದತ್ತ) ಕೊಂಡಯ್ಯುತ್ತದೆ. ಆದ್ದರಿಂದ ಪ್ರತಿಯೊಬ್ಬನೂ ಜ್ಞಾನ ಸಂಪಾದನೆ ಮಾಡಲೇಬೇಕು. ಜ್ಞಾನ ಸಂಪಾದನೆಯು ಅಮೃತಪಾನ ಮಾಡಿದಷ್ಟು ಸಂತೋಷವನ್ನು ಕೊಡುತ್ತದೆ. ಪ್ರವಾದಿ ಮಹಮ್ಮದ್ ಹೇಳಿದಂತೆ 'ಮೋಕ್ಷ ಸಾಧನೆಗೆ ಜ್ಞಾನ ಅಗತ್ಯ. ಜ್ಞಾನಿಯಾದರೆ ಮಾತ್ರ ಅಲ್ಲಾನ ಪ್ರೀತಿಗೆ ಪಾತ್ರರಾಗುತ್ತಾರೆ. ಜ್ಞಾನ ಸಂಪಾದನೆಗಾಗಿ ತೊಟ್ಟಿಲಿನಿಂದ ಗೋರಿಯವರೆಗೆ ಶಿಕ್ಷಣ ಸಂಪಾದಿಸುವಲ್ಲಿ ಸತತ ಪ್ರಯತ್ನವಾದಿಯಾಗಿರಬೇಕು. ಇದರಿಂದ ವ್ಯಕ್ತಿ ತನ್ನ ಮುಖ್ಯ ಕರ್ತವ್ಯಗಳನ್ನು ಅರಿತುಕೊಂಡು, ಸತ್ಯಾಸತ್ಯತೆಗಳನ್ನು ಕಂಡುಕೊಂಡು, ಧರ್ಮಾಧರ್ಮಗಳನ್ನು ವಿವೇಚಿಸುತ್ತ ಜೀವನ ನಡೆಸಲು ನೆರವಾಗುವುದರಿಂದ ಬಡವಬಲ್ಲಿದರು ಎಂಬ ಭೇದವಿಲ್ಲದೇ ಜ್ಞಾನಾರ್ಜನೆ ಮಾಡಬೇಕು.'

ಇಸ್ಲಾಂಧರ್ಮ ಬೋಧನೆಯು ಎಲ್ಲರಿಗಾಗಿ ಇದೆ. ಇಸ್ಲಾಂ ತತ್ವಗಳೂ ಜೀವನ ಸುಧಾರಣೆಯ ಮೈಲಿಗಲ್ಲುಗಳು. ಇವುಗಳನ್ನು ಅರಿತುಕೊಂಡು ಪ್ರಸಾರ ಮಾಡುವುದು ಎಲ್ಲರ ಕರ್ತವ್ಯವಾಗಿದೆ. ಜ್ಞಾನವು ಆಧ್ಯಾತ್ಮಿಕವಾಗಿರಲಿ, ಲೌಕಿಕವಾಗಿರಲಿ, ಸಮಾಜ ಸುಧಾರಣೆಗಾಗಿ ಆಗಲಿ ಎಲ್ಲರೂ ಅದನ್ನು ಸಂಪಾದಿಸಬೇಕೆನ್ನುವುದು ಇವರ ಅಭಿಪ್ರಾಯವಾಗಿತ್ತು.

ಇದಕ್ಕೆ ತಕ್ಕಂತೆ ಶಿಕ್ಷಣದಲ್ಲಿಯೂ ಬೇರೆ ಬೇರೆ ವಿಷಯಗಳ ಪಠ್ಯಕ್ರಮ ಇದ್ದಿದ್ದು ಇದಕ್ಕೆ ಸಾಕ್ಷಿಯಾಗಿದೆ.

ಪಠ್ಯಕ್ರಮವು ಲೌಕಿಕ ಮತ್ತು ಧಾರ್ಮಿಕ ಎಂಬ ಎರಡು ವಿಭಾಗಗಳನ್ನೊಳಗೊಂಡಿತ್ತು. ಲೌಕಿಕ ವಿಭಾಗದಲ್ಲಿ ಆರಬ್ಬಿವ್ಯಾಕರಣ, ಸಾಹಿತ್ಯ, ಗದ್ಯ, ತರ್ಕ, ತತ್ವಶಾಸ್ತ್ರ, ನ್ಯಾಯಶಾಸ್ತ್ರ, ಜ್ಯೋತಿಷ್ಯ, ಅಂಕಗಣಿತ, ಚರಿತ್ರೆ, ಭೂವಿವರಣೆ, ವೈದ್ಯ, ವ್ಯವಸಾಯ, ಈ ಮುಂತಾದ ವಿಷಯಗಳು ಸೇರಿದ್ದವು; ಧಾರ್ಮಿಕ ವಿಭಾಗದಲ್ಲಿ ಕುರಾನಿನ ಅಧ್ಯಯನ, ಕುರಾನನ್ನು ಕುರಿತ ವ್ಯಾಖ್ಯಾನಗಳು, ಮಹಮ್ಮದೀಯ ಸಂಪ್ರದಾಯಗಳು, ಇಸ್ಲಾಂ ನ್ಯಾಯಶಾಸ್ತ್ರ ಸೂಫಿ ವಿಧಿಗಳು ಸೇರಿದ್ದವು.

ಈ ಪಠ್ಯಕ್ರಮವು ಅಂದಿನ ಜ್ಞಾನ ಪ್ರಸಾರ ಹಾಗೂ ಧರ್ಮ ಪ್ರಸಾರದ ಗುರಿಯನ್ನು ಸ್ಪಷ್ಟವಾಗಿ ನಿರ್ದೇಶಿಸುತ್ತದೆ.

**೬.೨.೩ ಶಿಕ್ಷಣವನ್ನು ವಿಸ್ತರಿಸುವುದು**

ತಮ್ಮ ಶಿಕ್ಷಣವನ್ನು ವಿಸ್ತರಿಸುವುದೂ ಮಹಮ್ಮದೀಯರ ಶಿಕ್ಷಣದ ಒಂದು ಗುರಿಯಾಗಿತ್ತು. ಶಿಕ್ಷಣವನ್ನು ವಿಸ್ತರಿಸದಂತೆ ತಮ್ಮ ಧರ್ಮ ಪ್ರಚಾರದ ಗುರಿಯನ್ನು ಸಾಧಿಸಬಹುದೆಂಬುದು ಅವರ ಅಬಿಪ್ರಾಯವಾಗಿತ್ತು. ಆದ್ದರಿಂದ ಮಧ್ಯಯುಗದ ಪ್ರಾರಂಭದಲ್ಲಿ ಶಿಕ್ಷಣ ಪ್ರಸಾರಕ್ಕಗಿ ಮಸೀದಿಗಳೇ ಕೇಂದ್ರಗಳಾದವು. ಅದಕ್ಕೆ ಸೇರಿದಂತೆ ಕ್ರಮೇಣ ಮಕ್ತಾಬ್‌ಗಳನ್ನು ಪ್ರಾರಂಭಿಸಿದರು. ಇವುಗಳಲ್ಲಿ ಈ ಮೇಲಿನ ಉದ್ದೇಶ ಸಾಧನೆಗಾಗಿ ಶಿಕ್ಷಣವು ಒಂದು ಉಪಕರಣವಾಗಿತ್ತು.

ಮಸೀದಿ ಹಾಗೂ ಮಕ್ತಾಬ್‌ಗಳಲ್ಲಿ ಲೌಕಿಕ ಶಾಸ್ತ್ರಾಧ್ಯಯನದ ಜೊತೆಯಲ್ಲಿ ಕುರಾನಿನ ಅಧ್ಯಯನ ಕಡ್ಡಾಯವಾಗಿತ್ತು. ಮಹಮ್ಮದೀಯ ಮತದ ಮೂಲ ತತ್ವಗಳನ್ನು ಪರಿಚಯ ಮಾಡಿಕೊಡುವುದೂ ನಡೆಯುತ್ತಿತ್ತು.

ಮಧ್ಯಯುಗದ ಪ್ರಾರಂಭದಿಂದಲೇ ಶಿಕ್ಷಣದ ವಿಸ್ತಾರ ಪ್ರಾರಂಭಗೊಂಡಿತು. ಮುಂದೆ ಮಹಮ್ಮದ ಘೋರಿಯ ಕಾಲದಲ್ಲಿ ಉನ್ನತ ಶಿಕ್ಷಣಕ್ಕಾಗಿ ಮದ್ರಸಾಗಳೂ ತಲೆ ಎತ್ತಿದವು.

ಪ್ರಾರಂಭದಲ್ಲಿ ಮಸೀದಿ, ಮಕ್ತಾಬ್‌ಗಳಲ್ಲಿ ಹಿಂದುಗಳಿಗೆ ಪ್ರವೇಶ ನಿಷೇಧಿಸಿದರೂ ಬಳಿಕ ಇದು ಸಡಿಲಗೊಂಡಿತು. ರಾಜಕುಮಾರರೂ, ಸಾಮಾನ್ಯ ಜನರೂ ಪ್ರವೇಶ ಪಡೆದರು. ರಾಜಕುಮಾರರ ಶಿಕ್ಷಣಕ್ಕೆ ಸಂಬಂಧಿಸಿದಂತೆ ಅಲ್ಲಿ ಕಾರ್ಯಕ್ರಮಗಳೂ ಏರ್ಪಡಲಾರಂಭಿಸಿದವು. ಅರಬ್ಬೀ ಮತ್ತು ಪಾರಸೀ ಭಾಷೆಯಲ್ಲಿ ಓದು, ಬರಹವನ್ನು ಕಲಿಸುತ್ತಿದ್ದರು. ಅವರ ಮನಸ್ಸಿನಲ್ಲಿ ಸಮಾನತೆಯ ಭಾವನೆಯನ್ನು ಮೂಡಿಸುತ್ತಿದ್ದರು. ರಾಜಕುಮಾರರಿಗಿರುವ ಶಿಕ್ಷಣವನ್ನೇ ಸಾಮಾನ್ಯ ಮಕ್ಕಳೂ

ಮಕ್ತಾಬ್‌ಗಳಲ್ಲಿಪಡೆಯುತ್ತಿದ್ದರು. ಪರ್ಷಿಯನ್ ಲಿಪಿಯ ಜೊತೆ ಉರ್ದು ಭಾಷೆಯನ್ನು ಇವರು ಕಲಿಯಬೇಕಾಗುತ್ತಿತ್ತು. ಪ್ರಾಥಮಿಕ ಶಿಕ್ಷಣದ ಈ ಹಂತದಲ್ಲಿ ಜೀವನಕ್ಕೆ ಅಗತ್ಯವಾದ ಅಂಶಗಳನ್ನು ಕಲಿಸಲಾಗುತ್ತಿತ್ತು. ಗುಲಿಸ್ಥಾನ ಮತ್ತು ಬೇಸ್ಥಾನ ಕಥೆಗಳ ಮೂಲಕ ನೀತಿಪಾಠ ಬೋಧಿಸಲಾಗುತ್ತಿತ್ತು. ಇಂತಹ ಬುನಾದಿಯುಳ್ಳ ಶಿಕ್ಷಣದ ಪ್ರಸಾರಕ್ಕೆ ಆಗ ಮಹತ್ವ ಕೊಡಲಾಗಿತ್ತು.

**೬.೨.೪ ಶೈಕ್ಷಣಿಕ ಮೌಲ್ಯಗಳನ್ನು ಬೆಳೆಸುವುದು**

ಮಹಮ್ಮದೀಯ ಧರ್ಮದಲ್ಲಿ ಶೈಕ್ಷಣಿಕ ಮೌಲ್ಯಗಳಿಗೆ ಆದ್ಯತೆ ನೀಡಲಾಗಿತ್ತು. ಆದ್ದರಿಂದ ಶಿಕ್ಷಣ, ಶಿಕ್ಷಣ ಸಂಸ್ಥೆ, ಅಧ್ಯಾಪಕ, ವಿದ್ಯಾರ್ಥಿ ಇವರ ಕುರಿತು ಪೂಜ್ಯ ಭಾವನೆಯಿತ್ತು. ತಂದೆ ತಾಯಿಯರು ತಮ್ಮ ಮಕ್ಕಳಿಗೆ ನೀಡುವ ಕೊಡುಗೆಗಳಲ್ಲಿ ಶಿಕ್ಷಣ ಶ್ರೇಷ್ಠವೆಂಬ ಭಾವನೆಯಿತ್ತು. ಇಂತಹ ಭಾವನೆಯಿಂದ ಪ್ರಭಾವಿತರಾದ ಮುಸ್ಲಿಂ ಅರಸರು ಶಿಕ್ಷಣಕ್ಕೆ ಸಹಾಯ ಮತ್ತು ಪ್ರಾಶಸ್ತ್ಯ ನೀಡಿದರು. ಮಹಮ್ಮದನ ಬೋಧನೆಗಳ ಪ್ರಕಾರ 'ಪೆನ್ನಿನ ಮಸಿಯು ಹುತಾತ್ಮನ ರಕ್ತಕ್ಕಿಂತ ಶ್ರೇಷ್ಠವಾದುದು.'

ಆದುದರಿಂದ ಶಾಲಾ ಕಟ್ಟಡಗಳನ್ನು ಕಟ್ಟಿಸುವುದು ಅತ್ಯಂತ ಪವಿತ್ರ ಕಾರ್ಯಗಳಲ್ಲಿ ಒಂದಾಯಿತು. ಮಸೀದಿಗಳನ್ನು ಕಟ್ಟಿಸುವಾಗ ಅದರ ಜೊತೆಯಾಗಿಯೇ ಮಕ್ತಾಬ್‌ಗಳನ್ನು ಕಟ್ಟಿಸಲಾಗುತ್ತಿತ್ತು.

ಕೆಲವು ಅರಸರು ಮತಾಂಧತೆಯಿಂದ ಹಿಂದೂ ದೇವಾಲಯಗಳನ್ನು ನೆಲಸಮಗೊಳಿಸಿ ಮಸೀದಿ ಮಕ್ತಾಬ್‌ಗಳನ್ನು ಕಟ್ಟಿಸಿರುವುದನ್ನು ಇಲ್ಲಿ ನೆನೆಯಬಹುದು.

ಮುಕ್ತಾಬ್‌ಗಳಲ್ಲಿ ಮಸೀದಿಯ ಇಮಾಮರೇ ಅಧ್ಯಾಪಕರಾಗಿರುತ್ತಿದ್ದರು. ಮಹಮ್ಮದೀಯರು ತಾವು ಸತ್ತರೆ ಮಸೀದಿಯಲ್ಲೋ, ಮಕ್ತಾಬ್ ಬಳಿಯೋ ಹೂಳಬೇಕೆಂದು ಇಚ್ಛಿಸುತ್ತಿದ್ದರು. ಇಲ್ಲಿ ಧರ್ಮ-ಶಿಕ್ಷಣ ಇವೆರಡೂ ಹೊಂದಿಕೊಂಡಿರುವುದನ್ನು ಗಮನಿಸಬಹುದು.

ಮಹಮ್ಮದೀಯ ಅರಸರು ತಮ್ಮ ಮತದವರು ನೀಡುತ್ತಿದ್ದ ಶಿಕ್ಷಣಕ್ಕೆ ಎಲ್ಲ ರೀತಿಯಿಂದಲೂ ಪ್ರೋತ್ಸಾಹ ನೀಡುತ್ತಿದ್ದರು. ಇದು ತಮ್ಮ ಧಾರ್ಮಿಕ ಕರ್ತವ್ಯವೆಂದು ಭಾವಿಸಿದ್ದರು. ಅರಸರ ಹಾಗೂ ಶಿಕ್ಷಣದ ದೃಷ್ಟಿಕೋನ ಸದಾ ಶೈಕ್ಷಣಿಕ ಮೌಲ್ಯಗಳನ್ನು ಎತ್ತರಿಸುವುದರಲ್ಲಿ ದನಾತ್ಮಕವಾಗಿತ್ತು.

### ೬.೨.೫ ಸಾಮಾಜಿಕ ನೀತಿ-ನಿಯಮಗಳ ಬೆಳವಣಿಗೆ

ಶಿಕ್ಷಣದ ಮೂಲಕ ನೀತಿಯುಕ್ತವಾದ ಐಹಿಕ ಜೀವನವನ್ನು ದೊರಕಿಸಿ ತನ್ಮೂಲಕ ವ್ಯಕ್ತಿ ಉನ್ನತ ಸ್ಥಾನಕ್ಕೇರುವಂತೆ ಸಹಾಯ ಮಾಡುವುದು ಶಿಕ್ಷಣದ ಒಂದು ಧ್ಯೇಯವಾಗಿತ್ತು.

ಇಸ್ಲಾಂ ಧರ್ಮಕ್ಕೆ ಅನುಸಾರವಾಗಿ ನೀತಿ ನಿಯಮಗಳನ್ನು ರೂಪಿಸುವುದು ಕಾಯ್ದೆಗಳು, ಸಾಮಾಜಿಕ ಸಂಪ್ರದಾಯಗಳು, ವಿಶೇಷ ರಾಜಕೀಯ ತತ್ವಗಳನ್ನು ಪ್ರಸಾರ ಮಾಡುವುದು ಮುಸ್ಲಿಂ ಶಿಕ್ಷಣ ಪದ್ಧತಿಯ ಗುರಿಯಾಗಿತ್ತು.

ಇಂತಹ ಶಿಕ್ಷಣ ಪಡೆದವರಿಗೆ ರಾಜಕೀಯ ಗೌರವವೂ ಇತರ ಸ್ಥಾನಮಾನಗಳೂ ದೊರಕುವಂತಿದ್ದುದರಿಂದ ಮುಸ್ಲಿಂರಂತೆ ಹಿಂದುಗಳೂ ಮಕ್ತಾಬ್‌ಗಳಲ್ಲಿ ಶಿಕ್ಷಣಪಡೆದು ಉನ್ನತ ಸ್ಥಾನಗಳಿಸಲು ಇಚ್ಛಿಸುತ್ತಿದ್ದರು. ಹತ್ತನೇ ಶತಮಾನದ ಬಳಿಕ ಮದ್ರಸಾಗಳಲ್ಲಿ ಉನ್ನತ ಶಿಕ್ಷಣಪಡೆದು ಹಿಂದುಗಳೂ ಉನ್ನತ ಸ್ಥಾನಮಾನಕ್ಕೇರಿದ್ದುದು ಇತಿಹಾಸದಿಂದ ತಿಳಿದು ಬರುತ್ತದೆ. ಇದಕ್ಕೆ ೧೧ನೇ ಶತಮಾನದಲ್ಲಿಯೇ ತಳಪಾಯ ಬಿದ್ದಿತ್ತೆನ್ನಬಹುದು.

ಇಂತಹ ಶಿಕ್ಷಣ ನೀಡುವುದರ ಉದ್ದೇಶವೆಂದರೆ ಜೀವನೋಪಾಯದ ಸಮಸ್ಯೆಯನ್ನು ಪರಿಹರಿಸುವುದಾಗಿತ್ತು. ಹೊಸ ಆಡಳಿತ ಭಾಷೆಯಾಗಿ ಪರ್ಷಿಯನ್ ಭಾಷೆಯನ್ನು ಅಂಗೀಕರಿಸಿದ್ದರಿಂದ ಮುಸ್ಲಿಂರಂತೆ ಹಿಂದೂಗಳೂ ಆ ಭಾಷೆಯಲ್ಲಿ ಪಾಂಡಿತ್ಯ ಸಾಧಿಸಿ ರಾಜ್ಯದಲ್ಲಿ ಬೇರೆ ಬೇರೆ ಹುದ್ದೆಗಳಿಗೆ ಸೇರಲು ಪ್ರಯತ್ನಿಸುತ್ತಿದ್ದರು. ಆಗಿನ ಶಿಕ್ಷಣದ ಗುರಿಯೂ ಇದೇ ಆಗಿತ್ತು.

### ೬.೨.೬ ಭೌತಿಕ ಪ್ರಗತಿ

ಮುಸ್ಲಿಂರು ಭಾರತದ ಮೇಲೆ ದಾಳಿಮಾಡಿದ ಭೌತಿಕ ಬೆಳವಣಿಗೆಯ ಉದ್ದೇಶವು ಶಿಕ್ಷಣದಲ್ಲಿಯೂ ಅಳವಡಿಕೆಯಾಗಿತ್ತು. ಆದ್ದರಿಂದ ಮುಸ್ಲಿಂ ಶಿಕ್ಷಣವು ಭೌತಿಕ ಪ್ರಗತಿ ಹಾಗೂ ಸಿರಿಸಂಪತ್ತುಗಳ ಅಭಿವೃದ್ಧಿಗೆ ಗಮನವನ್ನು ನೀಡಿತ್ತು.

ಜನರನ್ನು ಆಕರ್ಷಿಸುವ ಸಲುವಾಗಿ ಉನ್ನತ ಹುದ್ದೆಗಳು, ಗೌರವಾನ್ವಿತ ಪದವಿಗಳು, ಪದಕಗಳು, ಗೌರವಧನ ಮೊದಲಾದವುಗಳನ್ನು ನೀಡಲಾಗುತ್ತಿತ್ತು. ಪ್ರತಿಭಾವಂತರಿಗೆ ಸೇನಾಧಿಕಾರಿ, ಮಂತ್ರಿ ಇಂತಹ

ಪದವಿಗಳನ್ನು ನೀಡಿ ಗೌರವಿಸಲಾಗುತ್ತಿತ್ತು. ೧೦ ನೇ ಶತಮಾನದಲ್ಲಿ ಪ್ರಾರಂಭವಾದ ಈ ಪದ್ಧತಿ ಬಳಿಕ ಮುಂದುವರಿಯಿತು.

ಬಡತನ ತಾಂಡವಾಡಬಾರದೆಂಬ ಕಾರಣದಿಂದ, ಸಂಪತ್ತಿನ ಅಭಿವೃದ್ಧಿಯ ದೃಷ್ಟಿಯಿಂದ ಇದು ಅಗತ್ಯವೆಂದು ಅರಸರು ಮನಗಂಡಿದ್ದರು. ಆದ್ದರಿಂದ ವಿದ್ಯಾರ್ಥಿಗಳನ್ನು ಬಾವೀ ಜೀವನಕ್ಕೆ ಅಣಿಗೊಳಿಸುವ ಶಿಕ್ಷಣಕ್ಕೆ ಮಹತ್ವ ಕೊಡಲಾಗಿತ್ತು.

### ೬.೨.೭ ರಾಜಕೀಯ ಉದ್ದೇಶ

ಮುಸ್ಲಿಂ ಶಿಕ್ಷಣವು ರಾಜಕೀಯ ಬೆಳವಣಿಗೆಯ ಕುರಿತು ಆಸಕ್ತಿಯನ್ನು ಹೊಂದಿತ್ತು. ಮುಸ್ಲಿಂರು ಭಾರತದಲ್ಲಿ ತಮ್ಮ ಪ್ರಭುತ್ವವನ್ನು ಸ್ಥಾಪಿಸಿದಾಗ ಭಾರತೀಯರು ನಾಗರಿಕತೆ, ಸಂಸ್ಕೃತಿ ಹಾಗೂ ರಾಜಕೀಯ ಜ್ಞಾನಗಳಲ್ಲಿ ಮುಸ್ಲಿಂರಿಗಿಂತ ಹೆಚ್ಚಿನ ಪ್ರಗತಿಯನ್ನು ಸಾಧಿಸಿದ್ದರು. ಆದ್ದರಿಂದ ಮುಸ್ಲಿಂರು ಭಾರತದಲ್ಲಿ ತಮ್ಮ ಪ್ರಭುತ್ವವು ಗಟ್ಟಿಯಾಗಿ ನಿಲ್ಲಬೇಕಾದಂತಹ ರಾಜಕೀಯ ವಾತಾವರಣ ಕಲ್ಪಿಸುವುದು ಅವಶ್ಯಕವಾಗಿತ್ತು. ಇದನ್ನು ಅರಿತುಕೊಂಡ ರಾಜರು ಪ್ರಾರಂಭದಲ್ಲಿ ಹಿಂಸಾಚಾರ ಮಾಡುತ್ತಿದ್ದರೂ ಬಳಿಕ ಹಿಂದುಗಳ ಮೇಲಿನ ದೌರ್ಜನ್ಯ ಅನವಶ್ಯಕವಾಗಿ ಮಾಡದಾದರು.

ಇದಕ್ಕೆಲ್ಲ ರಾಜಕೀಯ ಹಿತಾಸಕ್ತಿ ಕಾರಣವಾಗಿತ್ತು. ಅನ್ಯದೇಶವೊಂದರಲ್ಲಿ ತಾವು ರಾಜ್ಯಕಟ್ಟಿ ಆಳಬೇಕಾಗಿದ್ದುದರಿಂದ ಅವರ ಬೆಂಬಲದ ಅನಿವಾರ್ಯತೆಯನ್ನು ಮುಸ್ಲಿಂ ಅರಸರು ಅರಿತುಕೊಂಡು ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಹಿಂದುಗಳಿಗೆ ಅವಕಾಶವಿತ್ತಿರುವುದು ಇತಿಹಾಸದಿಂದ ತಿಳಿದು ಬರುತ್ತದೆ.

### ೬.೨.೮ ಚಾರಿತ್ರ್ಯ ನಿರ್ಮಾಣ ಮತ್ತು ವ್ಯಕ್ತಿತ್ವದ ವಿಕಾಸ

ಇಸ್ಲಾಂ ಧರ್ಮದಲ್ಲಿ ವ್ಯಕ್ತಿಯ ಚಾರಿತ್ರ್ಯಕ್ಕೆ ಅತ್ಯಂತ ಹೆಚ್ಚಿನ ಮಹತ್ವವನ್ನು ನೀಡಲಾಗಿದೆ. 'ಚಾರಿತ್ರ್ಯಹೀನ ವ್ಯಕ್ತಿ ಕಸಕ್ಕಿಂತಲೂ ಕಡೆ' ಎಂದು ಭಾವಿಸಲಾಗುತ್ತಿತ್ತು. ಸಮಾಜಘಾತುಕನನ್ನು ಅಲ್ಲಾ ಮೆಚ್ಚುವುದಿಲ್ಲವೆಂಬ ಭಾವನೆಯಿತ್ತು. ಉತ್ತಮ ನಡತೆ, ವಿನಯ, ದಯೆ, ಅಂತಃಕರಣ, ಪ್ರೀತಿ, ಸಹಕಾರ ಮುಂತಾದವುಗಳನ್ನು ಚಿಕ್ಕಂದಿನಲ್ಲಿಯೇ ಬೆಳೆಸಿಕೊಳ್ಳಬೇಕು. ಪರಸ್ಪರರಲ್ಲಿ ಉತ್ತಮವಾದ ತಿಳುವಳಿಕೆ ಮೃದು ಭಾಷೆ, ಅಸಹಾಯಕರಿಗೆ ಸಹಾಯ ಮಾಡುವುದು. ಆದರ್ಶ ವ್ಯಕ್ತಿತ್ವವನ್ನು ಹೊಂದುವುದಕ್ಕಾಗಿ

ಉತ್ತಮ ಚಾರಿತ್ರ್ಯವನ್ನು ನಿರ್ಮಾಣ ಮಾಡಿಕೊಳ್ಳಬೇಕು. ಇದಕ್ಕಾಗಿ ಸತತ ಪ್ರಯತ್ನ ಮತ್ತು ಪರಸ್ಪರ ತಿಳಿವಳಿಕೆ ಇರುವುದು ಅಗತ್ಯವಾಗಿದೆ ಎಂಬ ಭಾವನೆಯಿಂದ ಶಿಕ್ಷಣದಲ್ಲಿ ಚಾರಿತ್ರ್ಯ ನಿರ್ಮಾಣಕ್ಕೆ ಹೆಚ್ಚಿನ ಅವಕಾಶ ನೀಡಲಾಗಿತ್ತು. ವ್ಯಕ್ತಿಯ ವ್ಯಕ್ತಿತ್ವ ವಿಕಾಸನಕ್ಕಾಗಿ ಚಾರಿತ್ರ್ಯನಿರ್ಮಾಣ ಶಿಕ್ಷಣದ ಗುರಿಯಾಗಿತ್ತು.

### ೬.೨.೯ ಶಿಸ್ತಿನ ಪರಿಪಾಲನೆ

ಜ್ಞಾನ ಸಂಪಾದನೆ, ಚಾರಿತ್ರ್ಯ ನಿರ್ಮಾಣಗಳಲ್ಲಿ ಶಿಸ್ತಿನ ಪಾತ್ರ ಮಹತ್ವದ್ದಾಗಿದೆ. ಶಿಸ್ತು ಬದ್ಧ ಜೀವನವು ಇವನ್ನೆಲ್ಲ ಮೈಗೂಡಿಸಿಕೊಳ್ಳಲು ಸಹಾಯಕವಾಗುತ್ತದೆ. ಶಿಕ್ಷಣಕ್ಕೆ 'ಬಿಸ್ಮಿಲ್ಲಾ' ಎಂಬ ಸಂಸ್ಕಾರದಿಂದ ಪ್ರವೇಶ ಪಡೆದ ವಿದ್ಯಾರ್ಥಿಯು ಶಿಸ್ತಿನಿಂದ ಜ್ಞಾನವನ್ನು ತನ್ನದಾಗಿಸಿಕೊಳ್ಳಬೇಕೆಂಬುದಾಗಿ ಬಯಸಲಾಗುತ್ತಿತ್ತು. ವ್ಯಕ್ತಿತ್ವದ ಸರ್ವಾಂಗೀಣ ಪ್ರಗತಿಗಾಗಿ ಮತ್ತು ಸಾಮಾಜಿಕ ಸ್ವಾಸ್ಥ್ಯವನ್ನು ಕಾಯ್ದುಕೊಳ್ಳುವುದಕ್ಕಾಗಿ ಜೀವನದ ಪ್ರತಿರಂಗದಲ್ಲೂ ಶಿಸ್ತನ್ನು ಮೂಡಿಸಿಕೊಳ್ಳಬೇಕು. ಆದ್ದರಿಂದ ಶಿಕ್ಷಣದಲ್ಲಿ ಶಿಸ್ತನ್ನು ಅವಿಭಾಜ್ಯ ಅಂಗವಾಗಿರಿಸಿಕೊಂಡಿತ್ತು.

## ೬.೩ ಸ್ತ್ರೀಶಿಕ್ಷಣದ ಸ್ಥಿತಿಗತಿ ಹಾಗೂ ಸ್ತ್ರೀಯರಿಗೆ ಶಿಕ್ಷಣ ವ್ಯವಸ್ಥೆ

ಮಧ್ಯಯುಗದ ಪ್ರಾರಂಭದ ಎರಡು ಶತಮಾನಗಳಲ್ಲಿಯ ಸ್ತ್ರೀ ಶಿಕ್ಷಣದ ಸ್ಥಿತಿಗತಿಗಳ ಕುರಿತು ಅಭ್ಯಸಿಸುವ ಪೂರ್ವದಲ್ಲಿ ಒಮ್ಮೆ ಸಿಂಹಾವಲೋಕನ ಅಗತ್ಯ.

ಭಾರತಕ್ಕೆ ಪರಕೀಯರ ದಾಳಿ ಆದರ ಇತಿಹಾಸದ ಪ್ರಾರಂಭದಯುಗದಿಂದಲೇ ಇದೆ ಎಂಬುದು ಇಲ್ಲಿ ಉಲ್ಲೇಖನೀಯ. ಋಗ್ವೇದ ಕಾಲದಲ್ಲಿ ಈ ಪರಕೀಯರನ್ನು 'ದಸ್ಯು'ಗಳು ಎಂದು ಕರೆಯಲಾಗಿದೆ. ಈ ದಸ್ಯುಗಳ ಹಾವಳಿ ಹೆಚ್ಚಾಗಿ ಬಾರತೀಯರಲ್ಲಿ ಹಾಗೂ ಅವರಲ್ಲಿ ಸಂಬಂಧವೇರ್ಪಟ್ಟು ವರ್ಣಸಂಕರವಾಗುವ ಭಯದಿಂದ ಸಾಮಾಜಿಕ ಹಾಗೂ ಸಾಂಸ್ಕೃತಿಕ ರಕ್ಷಣೆಗಾಗಿ ಮನು, ಯಾಜ್ಞವಲ್ಕ್ಯ, ಬೌಧಾಯನರಂಥ ಮಹರ್ಷಿಗಳು ಸ್ತ್ರೀಯರಿಗೆ ನಿರ್ಬಂಧ ಹಾಕಲು ಒಂದು ಕಾರಣವಾಗಿಬೇಕು ಎಂಬುದಾಗಿ ನಾವು ಹಿಂದಿನ ಅಧ್ಯಾಯಗಳಲ್ಲಿ ಅಭ್ಯಸಿಸಿದ್ದೇವೆ.

ಮುಂದೆ ವೇದೋತ್ತರಕಾಲದ ಉತ್ತರಾರ್ಧಭಾಗದಲ್ಲಿ ಗ್ರೀಕರು, ಸಿಥಿಯನ್ನರು, ಹೂಣರು ಮುಂತಾದವರು ದಾಳಿ ಮಾಡಿದ ಕುರಿತಾಗಿಯೂ ವಿಶ್ಲೇಷಿಸಿದ್ದೇವೆ. ಇಂತಹ ಅಕ್ರಮಣಕಾರರ ಭಯದಿಂದ ಮುಂದೆ ತಾಯಿ-ತಂದೆಗಳು ತಮ್ಮ ಹೆಣ್ಣುಮಕ್ಕಳಿಗೆ ಬೇಗನೇ ಮದುವೆ ಮಾಡುವ ಸಂಪ್ರದಾಯ

ಬಂದಿರಬೇಕೆಂಬುದಾಗಿ ಇತಿಹಾಸಕಾರರು ಊಹಿಸುತ್ತಾರೆ. ಇದರ ಫಲವಾಗಿ ಕ್ರಮೇಣ ಉಪನಯನ ಸಂಸ್ಕಾರಕ್ಕೂ ವಿದ್ಯಾಭ್ಯಾಸಕ್ಕೂ ಧಕ್ಕೆ ಬಂದಿರಬೇಕೆಂಬುದು ಇತಿಹಾಸಕಾರರ ಅಂಬೋಣವಾಗಿದೆ. ಕೆಲ ಇತಿಹಾಸಕಾರರು ಇದನ್ನು ತಳ್ಳಿ ಹಾಕುತ್ತಾರೆ. ಮೌರ್ಯರ ಕಾಲದಲ್ಲಿಯೇ ಈ ಬದಲಾವಣೆ ಆರಂಭವಾಗಿತ್ತೆಂದೂ ಆಗ ಪರಕೀಯ ದಾಳಿಗಳಾವವೂ ಇರಲಿಲ್ಲ ವೆಂಬುದಾಗಿಯೂ, ಬೇರೆ ಕಾರಣವಿರಬೇಕೆಂಬುದಾಗಿಯೂ ವಾದಿಸುತ್ತಾರೆ.

ಆ ಕಾಲದಲ್ಲಿ ಆರ್ಯರು, ಆರ್ಯರಲ್ಲದ ಸ್ತ್ರೀಯರನ್ನು ವಿವಾಹವಾಗುವುದರಲ್ಲಿ ಒಂದು ಸಮಸ್ಯೆಯು ತಲೆದೋರುತ್ತಿತ್ತು. ಆರ್ಯರಿಗೆ ಯಜ್ಞದ ಆಚರಣೆಗಳು ಧರ್ಮಾಚರಣೆಯ ತಳಪಾಯಗಳಾಗಿದ್ದವು. ಈ ಯಜ್ಞಯಾಗಾದಿಗಳಿಗೆ ಪತ್ನಿ ಸಹದರ್ಮಿಣಿಯಾಗಿದ್ದಳು. ಪತ್ನಿರಹಿತನಾಗಿ ಯಜ್ಞಮಾಡಿದ್ದಲ್ಲಿ ಅದರ ಫಲ ದೊರೆಯುವುದಿಲ್ಲವೆಂಬ ಭಾವನೆಯಿತ್ತು. ಪರಕೀಯ ಸ್ತ್ರೀ ವೈದಿಕ ಸಂಸ್ಕಾರಗಳ ಜ್ಞಾನ ಮಂತ್ರಗಳ ಜ್ಞಾನ ಹೊಂದಿರುತ್ತಿರಲಿಲ್ಲ. ಆದರೆ ಪುರುಷರ ಆಕರ್ಷಣೆ ಅವರ ಕಡೆಗಿತ್ತು. ಯಜ್ಞಯಗಾದಿಗಳ ಕುರಿತು ಆಸಕ್ತಿಯೂ ಅವರಿಗೆ ಇದ್ದಿರಲಿಕ್ಕಿಲ್ಲ. ಆದ್ದರಿಂದ ಇಂತಹ ಗೊಂದಲ ನಿವಾರಣೆಗಾಗಿ ಆರ್ಯ ಸ್ತ್ರೀಯರಿಗೆ ವೈದಿಕ ಸಂಸ್ಕಾರ ಹಾಗೂ ಶಿಕ್ಷಣ ನಿಷೇಧಿಸುವ ಯತ್ನ ಮಾಡಿರಬೇಕು. ಎಂದು ಇತಿಹಾಸಕಾರರು ಕಾರಣ ನೀಡುತ್ತಾರೆ.

ಮೌರ್ಯರ ಕಾಲದಲ್ಲಿ ಪರಕೀಯರ ದಾಳಿ ಆರಂಭವಾಗಿರದಿದ್ದರೂ ಮಹಿಳೆಯರಿಗೆ ಉಪನಯನ ಕೇವಲ ಹೆಸರಿಗೆ ಮಾತ್ರ ಸಂಸ್ಕಾರವಾಗುತ್ತ ಬಂದಿತ್ತು. ಆದರೂ ಅನೇಕ ಸ್ತ್ರೀಯರು ವಿದ್ಯಾಕಾಂಕ್ಷಿಗಳಾಗಿ ವಿದ್ಯೆ ಪಡೆಯುತ್ತಿದ್ದರೆಂಬುದಕ್ಕೆ ಹಿಂದಿನ ಅಧ್ಯಾಯಗಳಲ್ಲಿ ಆಧಾರಗಳೊಂದಿಗೆ ವಿಶ್ಲೇಷಿಸಿದ್ದೇವೆ. ಸ್ತ್ರೀಯರಿಗೆ ಉಪನಯನ, ವಿದ್ಯಾಭ್ಯಾಸಕ್ಕೆ ಧಕ್ಕೆ ಬರುತ್ತಿದ್ದಂತೆ ೭ನೇ ಶತಮಾನದ ಉತ್ತರಾರ್ಧದಲ್ಲಿ ಬಾಲ್ಯವಿವಾಹಗಳು ಆರಂಭವಾದವು. ಪರಕೀಯರ ದಾಳಿ ಆರಂಭವಾದಂತೆ ಈ ಬಾಲ್ಯವಿವಾಹ ಸಂಪ್ರದಾಯಕ್ಕೆ ಪ್ರೋತ್ಸಾಹ ಸಿಕ್ಕಿತು.

ಅರಬರ ದಾಳಿಗಳಾಗಲು ಪ್ರಾರಂಭವಾಗುತ್ತಿದ್ದಂತೆ ಮತ್ತೆ ವರ್ಣಸಂಕರದ ಭಯ ಹೆಚ್ಚಾಗುತ್ತಿದ್ದಂತೆ ಬಾಲ್ಯ ವಿವಾಹಗಳೂ ಹೆಚ್ಚಾದವು.

ಮಸೀದಿಗಳಲ್ಲಿ, ಮಕ್ತಬ್‌ಗಳಲ್ಲಿ ಗಂಡು ಮಕ್ಕಳಿಗೆ ಶಿಕ್ಷಣ ಕಡ್ಡಾಯವಾಗಿತ್ತು. ಆದರೆ ಹೆಣ್ಣು ಮಕ್ಕಳಲ್ಲಿ ಘೋಷಾ ಪದ್ಧತಿ ಕಡ್ಡಾಯವಾಗಿದ್ದರಿಂದ ಹೆಣ್ಣು ಮಕ್ಕಳು ಮನೆಯಲ್ಲಿಯೇ ಇರಬೇಕಾಯಿತು.

ಸ್ತ್ರೀಯರಿಗೆ ಔಪಚಾರಿಕ ಶಿಕ್ಷಣ ನಿಷೇಧಿಸಲ್ಪಟ್ಟಿತ್ತು. ಆದರೆ ಶ್ರೀಮಂತ ಹಾಗೂ ಅರಸರ ಹೆಣ್ಣು ಮಕ್ಕಳು ಮಾತ್ರ ತಮ್ಮ ತಮ್ಮ ಮನೆಯಲ್ಲಿಯೇ ಶಿಕ್ಷಣ ಪಡೆಯುವ ವ್ಯವಸ್ಥೆ ಮಾಡಲಾಯಿತು. ಇಲ್ಲಿ ಸಾಮಾನ್ಯ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಧಕ್ಕೆ ಬಂದಿತು.

ಕ್ರಿ.ಶ ೩೧೨ ರಲ್ಲಿ ಸಂಭವಿಸಿದ ಮಹಮ್ಮದ್-ಬಿನ್-ಖಾಸಿಂನ ದಾಳಿಯಿಂದ ಸ್ತ್ರೀ ಶಿಕ್ಷಣದ ಹಿನ್ನೆಡೆ ಪ್ರಾರಂಭವಾಯಿತಾಗಿ ಇತಿಹಾಸಕಾರರು ಸ್ಪಷ್ಟಪಡಿಸುತ್ತಾರೆ.

ಖಾಸಿಮ್‌ನು ದಾಳಿಯಲ್ಲಿ ಗೆದ್ದಾಗ ಯುದ್ಧಾನಂತರ ಮುಸ್ಲಿಂ ಅರಸರಿಂದ ಇಸ್ಲಾಂಧರ್ಮ ಸ್ವೀಕರಿಸಲೇಬೇಕಾದ ಹಾಗೂ ಅವರ ಆಡಳಿತದಲ್ಲಿನ ತುಳಿತದ ಒತ್ತಡಗಳನ್ನು ಊಹಿಸಿದ ಸೋತ ಭಾರತೀಯ ಸೈನಿಕರು ಮತ್ತು ಬಹು ಸಂಖ್ಯಾತ ನಾಗರಿಕರು ಸಾವೇ ಮೇಲೆಂದು ತಮ್ಮ ಪ್ರಾಣಕ್ಕೆ ಅಂತ್ಯ ಹಾಡಿದರು. ಇವರ ಹಿಂದೆಯೇ ಬಹುತೇಕ ಜನರ ಪತ್ನಿಯರೂ ಸಹಗಮನ ನಡೆಸಿದರು. ಹೀಗೆ ಸತಿ ಹೋಗುವ ಅನಿಷ್ಟ ಪದ್ಧತಿಯೂ ಪ್ರಾರಂಭವಾಯಿತು.

ಮುಸ್ಲಿಂರ ಆಕ್ರಮಣದಿಂದ ಸಂಪತ್ತಿನ ಜೊತೆಗೆ ಸ್ತ್ರೀಯರು ದಾಸಿಯರೆಂದು ಅಪಹರಿಸಲ್ಪಡುತ್ತಿದ್ದರು. ಅಪಹೃತ ಸ್ತ್ರೀಯರಿಗೆ ಯಾವುದೇ ರೀತಿಯ ಸ್ಥಾನಮಾನಗಳಿರಲಿಲ್ಲ. ಅಂಥವರನ್ನು ಹೇಗೆ ಮರಳಿ ಹಿಂದೂ ಸಮಾಜಕ್ಕೆ ಬರಮಾಡಿಕೊಳ್ಳಬೇಕೆಂಬುದರ ಬಗ್ಗೆ ವಿಚಾರ ವಿಮರ್ಶೆಗಳು ನಡೆದವು.

ಯುದ್ಧದಲ್ಲಿ ಮೃತರದಾರವರ ಸ್ತ್ರೀಯರನ್ನು ಸೆರೆ ಹಿಡಿದು ಅವರನ್ನು ಸ್ವಾದೀನ ಪಡಿಸಿಕೊಳ್ಳುವುದು ಅಂದಿನ ರಾಜರ ಸಂಪ್ರದಾಯವೇ ಆಗಿತ್ತು. ಆಗ ಸತೀಧರ್ಮವನ್ನು ಕಾಯ್ದುಕೊಳ್ಳುವುದಕ್ಕಾಗಿ ಹಾಗೂ ಶತ್ರುಗಳ ಕೈಗೆ ಸಿಗದಂತೆ ಸತೀ ಹೋಗುವುದು ಕ್ಷತ್ರಿಯರಲ್ಲಿ ವಿಶೇಷವಾಗಿ ಬೆಳೆದು ಬಂದಿತು. ಕಾಲಕ್ರಮೇಣ ಸತೀ ಹೋಗುವುದು ಗೌರವದ ಸಂಕೇತವೆಂಬುದಾಗಿ ಇತರೇ ವರ್ಣದ ಜನರಿಂದಲೂ ಪರಿಗಣಿಸಲ್ಪಟ್ಟಿತು. ಪರಕೀಯರ ಅವ್ಯಾಹತ ದಾಳಿಗೆ ತುತ್ತಾದ ಉತ್ತರ ಭಾರದಲ್ಲಿ ಸತೀ ಹೋಗುವುದು ನಿಯಮವೇ ಆಗಿಬಿಟ್ಟಿತು.

ಪರಕೀಯ ದಾಳಿಕಾರರ ಅಪಮಾನಗಳನ್ನು ಎದುರಿಸಬೇಕಾದ ಪರಿಸ್ಥಿತಿ ಭಾರತೀಯ ಸ್ತ್ರೀಯ ಜೀವನದಲ್ಲಿ ಆಗ ಸಾಮಾನ್ಯವಾಯಿತು. ಇದರಿಂದ ತನ್ನ ಮಾನ ರಕ್ಷಣೆಗಾಗಿ ಮನೆಯನ್ನೇ ಆಶ್ರಯಿಸಬೇಕಾಯಿತು. ಇದರ ಪರಿಣಾಮವಾಗಿ ಸ್ತ್ರೀಯರು ಸಾಮಾಜಿಕ, ಧಾರ್ಮಿಕ, ರಾಜಕೀಯ

ಮುಂತಾದ ಚಟುವಟಿಕೆಗಳಿಂದ ದೂರವಾಗಿ ಕೇವಲ ಗೃಹಕೃತ್ಯಗಳಲ್ಲಿ ತೊಡಗುವ ಪರಿಸ್ಥಿತಿ ಬಂದೊದಗಿತು.

ಮುಸ್ಲಿಂ ದಾಳಿಗಳು ಆಗ ಸಿಂದ್ ಪ್ರಾಂತದ ಮೇಲೆ ಪ್ರಾರಂಭವಾಗಿ ಉತ್ತರಭಾರತದಲ್ಲಿಯೇ ಮುಂದುವರೆದಿದ್ದರಿಂದ ದಕ್ಷಿಣ ಭಾರತದಲ್ಲಿ ಸ್ತ್ರೀಶಿಕ್ಷಣಕ್ಕೆ ಅಷ್ಟೊಂದು ಧಕ್ಕೆ ಬರಲಿಲ್ಲ. ಆದ್ದರಿಂದ ಕರ್ನಾಟಕದಲ್ಲಿ ಅತ್ತಿಮಬ್ಬೆಯರಂತಹ ಸುಶಿಕ್ಷಿತ ಸ್ತ್ರೀಯರಿದ್ದರು. ಮುಂದಿನ ಕಾಲಗಳಲ್ಲಿ ಅಕ್ಕಮಹಾದೇವಿ, ಸಂಚಿಯ ಹೊನ್ನಮ್ಮ, ಬಿದನೂರು ಚೆನ್ನಮ್ಮ, ಬೆಳವಡಿ ಮಲ್ಲಮ್ಮ, ಕಿತ್ತೂರು ಚೆನ್ನಮ್ಮರಂತಹ ಮಹಿಳೆಯರು ಮಿಂಚಿ ತಮ್ಮ ಉಜ್ವಲ ಆದರ್ಶವನ್ನು ಕನ್ನಡ ನಾಡಿಗೆ ಕೊಟ್ಟು ಹೋಗಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಆದರೆ ಉತ್ತರಭಾರತದಲ್ಲಿ ಮೊಗಲ್ ಸಾಮ್ರಾಜ್ಯದ ಪತನದವರೆಗೂ ಸುಶಿಕ್ಷಿತ ಸ್ತ್ರೀಯರನ್ನು ಹೆಸರಿಸುವುದು ಕಷ್ಟವಾಗುತ್ತದೆ.

ಇಸ್ಲಾಂ ಧರ್ಮದಲ್ಲಿ ಆಗ ಸ್ತ್ರೀಶಿಕ್ಷಣಕ್ಕೆ ಅಷ್ಟೊಂದು ಪ್ರೋತ್ಸಾಹವಿಲ್ಲದಿದ್ದರೂ ಸ್ತ್ರೀಯರಿಗೆ ಅವರಲ್ಲಿ ಗೌರವಯುತ ಸ್ಥಾನಮಾನಗಳಿದ್ದವು. ಹಿಂದು ಸ್ತ್ರೀಯರ ವಿಷಯದಲ್ಲಿ ದಾಸಿಯರ ಭಾವನೆಯಿದ್ದರೂ ಉಳಿದಂತೆ ಇಸ್ಲಾಮೀಯರಲ್ಲಿ ಸ್ತ್ರೀಯರಿಗೆ ಗೌರವಯುತವಾಗಿ ನಡೆಸಿಕೊಳ್ಳಲಾಗುತ್ತಿತ್ತು. ಮಧ್ಯಯುಗದಲ್ಲಿ ಪ್ರಾರಂಭದಲ್ಲಿ ಸ್ತ್ರೀಯರಿಗೆ ಶಿಕ್ಷಣ ವ್ಯವಸ್ಥೆ ಇದ್ದಿಲ್ಲವಾದರೂ ನಂತರದ ಕಾಲಗಳಲ್ಲಿ ಸ್ತ್ರೀಯರಿಗಾಗಿ ಪ್ರತ್ಯೇಕ ಶಾಲೆಗಳನ್ನು (ಮಕ್ತಾಬ್ ಮತ್ತು ಮದ್ರಸಾ ಹಂತಗಳಲ್ಲಿ) ಪ್ರಾರಂಭಿಸಿದರು. ಈ ಸಂಸ್ಥೆಗಳಲ್ಲಿ ಬೋಧನೆಗಾಗಿ ವಯಸ್ಸಾದ ಮೌಲ್ವಿಗಳನ್ನು ನಿಯಮಿಸುತ್ತಿದ್ದರು. ಸ್ತ್ರೀಯರಿಗೆ ವಿಶಿಷ್ಟ ಶಿಕ್ಷಣಕ್ಕೂ ಆಗ ಅವಕಾಶವಿತ್ತಿದ್ದರು. ಆದರೆ ಮಧ್ಯಯುಗದ ಪ್ರಾರಂಭದಲ್ಲಿ ಆಗಷ್ಟೆ ದಾಳಿಗಳು ಪ್ರಾರಂಭವಾಗಿ ಸಾಮ್ರಾಜ್ಯ ವಿಸ್ತಾರ, ಸಂಪತ್ತುಲೂಟಿ, ಧರ್ಮ ಪ್ರಚಾರಗಳಲ್ಲಿಯೇ ಹೆಚ್ಚಿನ ಆಸಕ್ತಿವಹಿಸಿದ್ದ ಪ್ರಾರಂಭದ ಅರಸರಿಗೆ ಒಮ್ಮೇಲೆ, ಶಿಕ್ಷಣದಲ್ಲಿ ಒಂದು ನೆಲೆ ಕಾಣಿಸಲು ಸಾಧ್ಯವಾಗದೇ ಇಂತಹ ಪರಿಸ್ಥಿತಿ ಬಂದಿರಬಹುದು. ಬಳಿಕ ಹಂತ ಹಂತವಾಗಿ ಸ್ತ್ರೀಶಿಕ್ಷಣ ಚೇತರಿಸಿಕೊಂಡಿರಬೇಕು. ಆದರೂ ಪ್ರಾರಂಭದಲ್ಲಾದರೂ ಶ್ರೀಮಂತ ಮನೆತನದ ಹಾಗೂ ಅರಸರ ಮನೆತನದ ಸ್ತ್ರೀಯರಿಗೆ ವೇದ ಹಾಗೂ ವೇದೋತ್ತರ ಕಾಲಗಳಂತೆ ಮನೆಯಲ್ಲಿಯೇ ಶಿಕ್ಷಣ ದೊರಕುತ್ತಿದ್ದುದರ ಕುರಿತು ಈಗಾಗಲೇ ವಿಶ್ಲೇಷಿಸಿದ್ದೇವೆ. ಅಂದರೆ ಯಾವ ಕಾಲದಲ್ಲಾದರೂ, ಎಂತಹ ಸಾಮಾಜಿಕ, ರಾಜಕೀಯ ಪರಿಸ್ಥಿತಿಯಲ್ಲಾದರೂ ಸ್ತ್ರೀಶಿಕ್ಷಣದ ಮಹತ್ವದ ಅರಿವು ಸಮಾಜದಲ್ಲಿತ್ತು ಎಂಬುದು ಇಲ್ಲಿ ಸಾಬೀತಾಗುತ್ತದೆ.